ಬಯಕೆ. ನೀನು ಬರುವುದು ತುಸು ತಡವಾದರೂ ಅವರೆಷ್ಟು ಚಡಪಡಿಸುತ್ತಾರೆ ಗೊತ್ತೆ?

ನಿನ್ನ ಜಂಗಮ ಮನಸ್ಸನ್ನು ಪ್ರೀತಿಯಿಂದ ಕಟ್ಟಿಹಾಕಬಲ್ಲ ಹೆಣ್ಣೊಂದು ಅವರಿಗಾಸರೆಯಾಗಿ ಬೇಕಿದೆ. ಪ್ರೀತಿಯ ಬಂಧನ ಎಷ್ಟು ಹಿತವಾಗಿರುತ್ತದೆ. ಅದರ ಬಿಗಿತಕ್ಕೆ ಮನದತುಡಿತ ಗೊತ್ತಿರುತ್ತದೆ. ಅದೆಷ್ಟು ಬಿಗಿಯಾಗಿರುತ್ತದೊ ಅಷ್ಟೇ ಸಡಿಲವಾಗಿರುತ್ತದೆ. ಅದಿರುತ್ತದೆ – ಇಲ್ಲದಂತೆ.

ಪ್ರೀತಿಯೆಂದರೆ ಸ್ವಾತಂತ್ರ್ಯವೆಂದು ಅಪ್ಪ ಹೇಳಿದ್ದರು. ಅದರ ಮಹತ್ವವರಿತಿದ್ದರು. ಮೊದಲಿನಿಂದಲೂ ಪಂಜರದ ಗಿಳಿಗಳ ಹಾಗೆ ಮಕ್ಕಳನ್ನು ಬೆಳೆಸಲಿಲ್ಲ. ಆ ಕಾರಣದಿಂದಲೇ ನನಗವರ ಮೇಲೆ ವ್ಯಾಮೋಹವೆನ್ನುವಷ್ಟು ಪ್ರೀತಿಯಿದೆ. ಬಾಲ್ಯದಿಂದಲೂ ಪ್ರತಿ ಆಸೆ ಅರಿತು ನಡೆಸಿಕೊಡುತ್ತಿದ್ದರು. ನಮ್ಮ ವಿಚಾರ ಆಲೋಚನೆಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದರು. ನಮ್ಮ ಆಯ್ಕೆಯನ್ನು ನಮಗೇ ಬಿಟ್ಟುಕೊಟ್ಟಿದ್ದರಿಂದಲೇ ನನ್ನ ಹತಾಶೆ ಕ್ಷಣಗಳಲ್ಲೂ ನಾನು ಬದುಕುವುದನ್ನೇ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾದದ್ದು, ಥೇಟು ಅವರಂತೆಯೇ ನನ್ನ ಕನಸುಗಳ ಕುಡಿ ಸರ್ವದಮನನನ್ನು ಬೆಳೆಸಬೇಕೆಂದುಕೊಂಡೆ...

ಅವನು ನನ್ನ ಹಾಗೆ ಥೇಟು ಅಪ್ಪನ ಹಾಗೇ – ಬೆಳೆಯತೊಡಗಿದ. ಅವನಿದ್ದಾಗ – ಮನೆಯಲ್ಲಿ ನನ್ನದೆನ್ನುವ ವಸ್ತುವೊಂದಿದೆ ಈ ಅತಿಶಿಸ್ತುಗಳ ನಡುವೆ ಎಂದು ನನಗೆ ಸಮಾಧಾನ. ಅವನು ನಿರ್ಮಲವಾಗಿ ಯಾವ ಕಪಟವೂ ಅರಿಯದೆ, ಏನೊಂದೂ ಬಯಸದೆ ಮುಗ್ಧ ಮುಖದಲ್ಲಿ ನಗುವುದನ್ನು, ನಿದ್ದೆಮಾಡುವುದನ್ನು ನೋಡುತ್ತಾ ಗಂಟೆಗಳನ್ನು ನಿರಾಯಾಸ ಕಳೆದಿದ್ದೇನೆ ನಾನು. ಅಪರಾಹ್ನದ ರಾವು ಬಿಸಿಲಲ್ಲಿ ಮಹಾಪೂರದಂತೆ ತೂರಿಬರುವ ಕಠೋರ ನೆನಪುಗಳ, ಹಳವಂಡಗಳ ಹೊಡೆದೊಡಿಸಲು ಮಲಗಿದ ನನ್ನ ಮುದ್ದಿನ ಬೆತ್ತಲೆ ಮೈ ಸವರಿ, ಅಪ್ಪಿಕೊಂಡು ಗಪ್ಪನೆ, ಮೈವಾಸನೆ ಹೀರಿ ಸುಖಿಸಿದ್ದೇನೆ. ಆಶ್ರಯದ ಆ ಕುಡಿಯನ್ನು ಮಡಿಲಿಗೆ ಹಾಕಿಕೊಂಡು ಧ್ಯಾನದಲ್ಲಿ ಲೀನವಾಗಿದ್ದೇನೆ.

ಎಲ್ಲ ಹೆಣ್ಣುಗಳೂ ಒಂದೇ ಮನಸ್ಸಿನವರು ಚೈತ್ರ. ನಿನ್ನ ತಾಯಿಯೂ ನಿನ್ನನ್ನು ಹೀಗೆ ಬೆಳೆಸಿದರಂತೆ. ನನ್ನ ಭಯಕ್ಕೆ ಅಭಯವಾಗಿ, ಹತಾಶೆಗೆ ಆಶಯವಾಗಿ, ಸೋತೆನೆಂದು ಕುಸಿದಾಗ ಊರುಗೋಲಾಗಿ ಬೆಳೆದ ಸರ್ವದಮನ. ಅವನನ್ನು ಕಂಡಾಗ ದಹಿಸಿ ಬೂದಿಯಾದ ಆಸೆಗಳೆಲ್ಲಾ ಹಕ್ಕಿಯಾಗಿ ಮೇಲೇರುತ್ತಿದ್ದವು. ಆಗ ನಾನು ಬರೆದ ಕಥೆ, ‘ಕರುಳ ಕೂಗಿನ ಹಕ್ಕಿ!’

ಆದರೆ, ಹಕ್ಕಿ ಬೆಳೆದಂತೆ ಅದರ ಪುಕ್ಕಗಳೂ ಬಲಿಯುತ್ತವೆಂದು ನಾನರಿಯಲಿಲ್ಲ ನೋಡು. ಸರ್ವದಮನನ ರೆಕ್ಕೆ ಬೆಳೆದಾಗ ದುಶ್ಯಂತನಿಗೆ ಪಟ್ಟಾಭಿಷೇಕ ಚಿಂತೆ! ಶಕುಂತಲೆ ಎಂದಿಗೂ ಅವನಿಗೆ ನಿಮಿತ್ತ ತಾನೆ!? ನನಗಿದ್ದ ಒಂದೇ ಆಸರೆಯ ಬಳ್ಳಿಯನ್ನವರು ದೂರ ಮಾಡಿದರು! ಶಿಕ್ಷಣದ ನೆವದಲ್ಲಿ ದೂರದೂರಿನ ಶಾಲೆಯೊಂದಕ್ಕೆ ಸೇರಿಸಿದರು. ವರುಷಕ್ಕೊಮ್ಮೆ ನಾನವನನ್ನು ನೋಡಬಹುದಿತ್ತು! ಅದಾಗ ತೊದಲುಮಾತು. ಎಡುವುತ್ತ ನಡೆವುದ ಕಲಿತ ಕಂದ ಹೇಗಲ್ಲಿ ಇರಬಲ್ಲ? ನನಗವನ ನೆನಪಾದ ಹಾಗೆ, ಅವನಿಗೂ ನನ್ನ ನೆನಪು ಬಂದರೆ ಬುದ್ಧಿಬಲಿಯದ ಮಗು ಯಾರಲ್ಲಿ ತನ್ನ ಅಳಲು ತೋಡಿಕೊಂಡೀತು? ಯಾರಲ್ಲಿಯೂ ಏನನ್ನೂ ಹೇಳಲು ಮನಸೊಪ್ಪದಷ್ಟು ರೋಸಿದ್ದೆ. ಪ್ರತಿಭಟನೆಯ ಶಕ್ತಿಯೇ ಕಳೆದುಕೊಂಡಿದ್ದೆ. ಮನಸ್ಸು ಕದಡುವುದಕ್ಕೆ ಎಂಥ ಕ್ಷುಲ್ಲಕ ವಿಷಯಗಳೂ ಕಾರಣವಾಗಬಲ್ಲವು. ನನಗೆ ಹಾಗಾಯಿತು. ಸರ್ವದಮನನನ್ನು ಬಿಟ್ಟು ಬದುಕುವುದಾಗುತ್ತಿರಲಿಲ್ಲವೆ? ಅವರು ಅವನನ್ನು ದೂರದೂರಿನ ಶಾಲೆಗೆ ಸೇರಿಸಿದ್ದು ಸಹ ಅವನ ಒಳಿತಿಗಾಗಿಯೇ ಅಲ್ಲವೇ? ಇಷ್ಟಕ್ಕೂ ವರ್ಷಕ್ಕೊಮ್ಮೆ